# ಸುದ್ದಿ ಸಂಚಯ

## ಪುಷ್ಕರದಲ್ಲಿ ಶ್ರೀಮಾತೆ ಶಾರದಾದೇವಿಯವರು

ರಾಜಸ್ಥಾನದಲ್ಲಿ ಅಜ್ಮೀರದ ಹತ್ತಿರವಿರುವ ಪುಷ್ಕರವು ಅತ್ಯಂತ ಪುರಾತನ ತೀರ್ಥಕ್ಷೇತ್ರ. ಇದನ್ನು ತೀರ್ಥಗುರು ಎಂದೂ ಕರೆಯಲಾಗಿದೆ. ಪುರಾಣ ಕಥೆಯ ಪ್ರಕಾರ ಬ್ರಹ್ಮನು ತನ್ನ ಪವಿತ್ರ ಕೈಯಿಂದ ಕಮಲಪುಷ್ಪವನ್ನು ಎಸೆಯುವುದರ ಮೂಲಕ ಜಗತ್ಸೃಷ್ಟಿಯನ್ನು ಪ್ರಾರಂಭಿಸಿದನಂತೆ. ಆ ಪುಷ್ಪವು ಬಿದ್ದ ಜಾಗದಲ್ಲಿ ಈಗ ಪುಷ್ಕರ ಸರೋವರವಿದೆ. ಅದರ ಪಕ್ಕದಲ್ಲಿಯೇ ಒಂದು ಬ್ರಹ್ಮದೇವಾಲಯವಿದೆ. ಆ ದೇವಾಲಯದಲ್ಲಿಯೇ ಗಾಯತ್ರೀ ವಿಗ್ರಹವನ್ನೂ ಪ್ರತಿಷ್ಠಾಪಿಸಲಾಗಿದೆ. ಹತ್ತಿರದ ಬೆಟ್ಟದ ಮೇಲೆ ಒಂದು ಸಾವಿತ್ರಿಯ ದೇವಾಲಯವೂ ಇದೆ.

ಶ್ರೀಮಾತೆ ಶಾರದಾದೇವಿಯವರು ೧೮೯೭ರಲ್ಲಿ ಸ್ವಾಮಿ ಯೋಗಾನಂದ, ಯೋಗೀನ್ ಮಾ, ಲಕ್ಷ್ಮೀದೇವಿ ಮುಂತಾದವರೊಡನೆ ಈ ತೀರ್ಥಸ್ಥಳಕ್ಕೆ ಭೇಟಿಯಿತ್ತಿದ್ದರು. ಆ ಸಂದರ್ಭದಲ್ಲಿ ಅವರು ಸಾವಿತ್ರೀ ಬೆಟ್ಟಕ್ಕೆ ಹೋಗಿ ದೇವಾಲಯದೊಳಗೆ ಧ್ಯಾನಮಾಡುತ್ತ ಸಮಾಧಿಸ್ಥರಾದರು.

೧೯೭೩ರಲ್ಲಿ ರಾಮಕೃಷ್ಣ ಆಶ್ರಮದ ಭಕ್ತರಾದ ಓಂಪ್ರಕಾಶ ಶರ್ಮ ಎಂಬುವವರು, ಸಾವಿತ್ರೀ ದೇವಾಲಯದ ಪೂಜಾರಿಯ ಅನುಮತಿಯೊಂದಿಗೆ, ದೇವಾಲಯದ ಗರ್ಭಗುಡಿಯಲ್ಲಿ ಶ್ರೀಮಾತೆ ಶಾರದಾದೇವಿಯವರ ಒಂದು ಭಾವಚಿತ್ರವನ್ನು ಇರಿಸಿದರು. ಅಂದಿನಿಂದ ಸಾವಿತ್ರೀ ವಿಗ್ರಹದ ಜೊತೆಗೆ ಶ್ರೀಮಾತೆಯವರ ಪೂಜೆಯೂ ನಡೆಯುತ್ತಿದೆ. ಅಲ್ಲಿಯೇ ಸರಸ್ವತಿಯ ವಿಗ್ರಹವೂ ಇದೆ.

ಈ ವರ್ಷ ಅಂದರೆ ೨೦೦೨ರಲ್ಲಿ ಜಯಪುರದಲ್ಲಿರುವ ರಾಮಕೃಷ್ಣ ಮಿಷನ್ ಅಲ್ಲಿ ಶ್ರೀಮಾತೆಯವರ ಮೂರ್ತಿಯೊಂದನ್ನು ಪ್ರತಿಷ್ಠಾಪಿಸುವ ಯೋಜನೆ ಹಾಕಿಕೊಂಡಿತು. ದೇವಾಲಯದ ಅಧಿಕಾರಿಗಳು ಸಂತೋಷದಿಂದ ಅದಕ್ಕೆ ಅನುಮತಿ ನೀಡಿದರು. ಅಮೃತಶಿಲೆಯ ಒಂದು ಸುಂದರ ವಿಗ್ರಹ ಸಿದ್ಧವಾಯಿತು. ೧೭.೨.೨೦೦೨ರಂದು ವಿಗ್ರಹ ಪ್ರತಿಷ್ಠಾಪನೆಯ ಸಮಾರಂಭ ನೆರವೇರಿತು. ಇದರ ಅಂಗವಾಗಿ ಷೋಡಷೋಪಚಾರಪೂಜೆ, ಹೋಮ, ಭಜನೆ ಮುಂತಾದ ಕಾರ್ಯಕ್ರಮಗಳು ನಡೆದವು. ಅಜ್ಮೀರ್, ದೆಹಲಿ, ಜೈಪುರ, ಕಿಶನ್‌ಘರ್ ಮುಂತಾದ ಕಡೆಗಳಿಂದ ಬಹುಸಂಖ್ಯೆಯಲ್ಲಿ ಬಂದಿದ್ದ ಭಕ್ತರು ಪ್ರಸಾದವನ್ನು ಸ್ವೀಕರಿಸಿದರು. ಪುಷ್ಕರದ ೫೦೦ ಜನ ಬಡವರಿಗೆ ದರಿದ್ರನಾರಾಯಣ ಸೇವೆಯ ಅಂಗವಾಗಿ ಭೋಜನ ನೀಡಲಾಯಿತು.

ಈಗ ಪುಷ್ಕರದಲ್ಲಿ ಸಾವಿತ್ರಿ ಮತ್ತು ಸರಸ್ವತಿಯರೊಂದಿಗೆ ಶ್ರೀಮಾತೆಯವರೂ ವಿರಾಜಿಸುತ್ತಿದ್ದಾರೆ. ☆

## ಶತಮಾನೋತ್ಸವದ ಸಮಾರೋಪ ಸಮಾರಂಭ

ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ಪ್ರಾರಂಭವಾದ ರಾಮಕೃಷ್ಣ ಮಿಷನ್ ಸೇವಾಶ್ರಮ, ವಾರಾಣಸಿ, ತನ್ನ ಸಾರ್ಥಕ ಸೇವೆಯ ಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ಫೆಬ್ರುವರಿ ೧೪ರಿಂದ ೧೭ರವರೆಗೆ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಿತು. ಸೇವಾಶ್ರಮದ ಇತಿಹಾಸ ಮತ್ತು ಚಟುವಟಿಕೆಗಳ ಬಗ್ಗೆ ವಿವರಣಾತ್ಮಕ ಲೇಖನವು "ವಿವೇಕಪ್ರಭ"ದ ೨೦೦೦, ನವೆಂಬರ್ ಸಂಚಿಕೆಯಲ್ಲಿ ಪ್ರಕಟಗೊಂಡಿದೆ.

ಫೆಬ್ರುವರಿ ೧೪ರಂದು ಸೇವಾಶ್ರಮದ ಹೊರರೋಗಿಗಳ ವಿಭಾಗದ ಕಟ್ಟಡವನ್ನು ಪರಮ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ಉದ್ಘಾಟಿಸಿದರು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ನಡೆಯುತ್ತಿದ್ದ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗಹನಾನಂದಜಿ ಮಹಾರಾಜ್ ಅವರೇ ಅಲ್ಲದೆ ಮತ್ತಿತರೆ ಸ್ವಾಮಿಗಳಾದ ಗೋಕುಲಾನಂದ, ಪ್ರಭಾನಂದ, ಜಿತಾತ್ಮಾನಂದ, ನಿಖಿಲೇಶ್ವರಾನಂದ ಮುಂತಾದವರೂ ಮಾತನಾಡಿದರು. ೧೪ರಂದು ಸಂಜೆ ಸ್ಥಳೀಯ ಕಲಾಕಾರರು ಸಿತಾರ್ ಮತ್ತು ಪಿಟೀಲು ದ್ವಂದ್ವಗಾಯನವನ್ನು ನಡೆಸಿಕೊಟ್ಟರು. ಅದೇ ಸಂಜೆ ೭ ಗಂಟೆಗೆ ಶ್ರೀ ರಾಜನ್ ಮತ್ತು ಸಾಜನ್ ಮಿಶ್ರ ಅವರ ಭಕ್ತಿಗೀತೆಗಳ ಕಾರ್ಯಕ್ರಮ. ೧೫ರಂದು ಸಂಜೆ ೬.೩೦ಕ್ಕೆ ಹೈದರಾಬಾದಿನ ಕಲಾವಿದರಿಂದ ಪೆರಿನಿ ಶಿವತಾಂಡವ ನೃತ್ಯ ಮತ್ತು ಶ್ರೀರಾಮಕೃಷ್ಣ ಗೀತಿ ಎಂಬ ಕಾರ್ಯಕ್ರಮಗಳಿದ್ದವು. ೧೬ರಂದು ಸಂಜೆ "ಪುರೂಲಿಯ ಛೌ ನೃತ್ಯ" ಕಾರ್ಯಕ್ರಮವಿತ್ತು. ೧೭ರಂದು ಸಂಜೆ ವೃಂದಾವನದ ರಾಸಲೀಲ ಮಂಡಲದ ಶ್ರೀಕೃಷ್ಣ ರಾಸಲೀಲೆಯ ಕಾರ್ಯಕ್ರಮ ವಿತ್ತು. ೧೬ನೇ ದಿನಾಂಕದ ಸಾರ್ವಜನಿಕ ಸಭೆಯಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಈ ಎಲ್ಲ ಕಾರ್ಯಕ್ರಮಗಳಲ್ಲಿಯೂ ಭಕ್ತರು ಬಹುಸಂಖ್ಯೆಯಲ್ಲಿ ಭಾಗವಹಿಸಿದ್ದರು. ☆

## ವಿವೇಕಾನಂದ ಮಕ್ಕಳ ಅಭಿವೃದ್ಧಿ ನಿಧಿ

ಭಾರತದಲ್ಲಿ ಮಕ್ಕಳ ಆರೋಗ್ಯ ಮತ್ತು ಶಿಕ್ಷಣ ಬಹು ಮುಖ್ಯ ಸಮಸ್ಯೆಯಾಗಿದೆ. ಈಗಲೂ ಭಾರತದಲ್ಲಿ ಶಿಶುಮರಣ ಪ್ರಮಾಣ ಶೇಕಡ ೬೯. ರಾಮಕೃಷ್ಣ ಮಿಷನ್ ಲೋಕಶಿಕ್ಷಾ ಪರಿಷದ್, ನರೇಂದ್ರಪುರ, ಕೊಲ್ಕತಾ, ಈ ಕೇಂದ್ರವು "ವಿವೇಕಾನಂದ ಮಕ್ಕಳ ಅಭಿವೃದ್ಧಿ ನಿಧಿ" ಎಂಬ ಹೊಸ ಯೋಜನೆಯನ್ನು ರೂಪಿಸಿದೆ. ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ಇತ್ತೀಚೆಗೆ ಈ ಯೋಜನೆ ಯನ್ನು ಉದ್ಘಾಟಿಸಿದರು. ಒಂದು ಮಗುವಿನ ಯೋಗಕ್ಷೇಮಕ್ಕಾಗಿ ಒಮ್ಮೆಯೇ ರೂ.೧೨,೦೦೦ ನೀಡಬಹುದು, ಇಲ್ಲವೆ ಪ್ರತಿವರ್ಷ ರೂ.೧,೫೦೦ ನೀಡಬಹುದು. ಧನಸಹಾಯ ನೀಡಲಿಚ್ಛಿಸುವವರು Secretary, Ramakrishna Mission Lokashiksha Parishad, Narendrapur, Kolkata-700 013 ಇವರನ್ನು ಸಂಪರ್ಕಿಸಿ. ☆